ಈರಾ ಅಂಗೆಲ್ಲಾ ಸುಮ್ನುಮ್ನೆ ಮಾಡೊನಲ್ಲ, ಸಣ್ಣಿ ಈರಂಗೆ ಒಬ್ಳೆ ಮಗಳು. ಕಿತ್ಕಂಡ್ತಿನ್ನೊ ಬಡ್ತನ ಇದ್ರೂ ಮಗಳ್ನ ವೈನಾಗಿಯೆ ಸಾಕಿದ್ದ. ಗಂಡು ಮಕ್ಕಳಿಬ್ರಿದ್ರೂ ಕೆಲ್ಸಕ್ಕೆ ಬಾರದ್ವು.ಅವನ್ನ ಇಸ್ಕೂಲಿಗೆ ಕಳ್ಸಿದ್ರೂ ಓದೋ ಯೋಗ್ತಿ ಇಲ್ದೆ ಪುಂಡಾಟ್ಕೆ ಮಾಡ್ಕೊಂಡು ಅಪ್ಪ ದುಡ್ದಾಕಿದ್ದನ್ನ ತಿನ್ಕೊಂಡು ಪೋಲಿ ಅಲಿತಿದ್ವು. ಸಾಲ್ದು ಅಂತ ಕುಡ್ತ ಬ್ಯಾರೆ ಕಲ್ತಕಂಡು ಮನೆನಾ ರಣರಂಗ ಮಾಡ್ತಿದ್ವು. ಈ ನನ್ನ ಮಕ್ಳಂತು ಕೆಟ್ಟು ಕೆರ ಹಿಡದ್ವು, ಈ ಅನಿಷ್ಟಗಳು ಈ ಜನ್ಮದಲ್ಲಿ ಉದ್ಧಾರ ಆಗಲ್ಲ, ತಂಗೀಗೂ ಉದ್ಧಾರ ಆಗೋಕೆ ಬಿಡಲ್ಲ, ತಾನೇ ಏನಾದ್ರೂ ಮಾಡಿ ಇರೋ ಒಬ್ಳು ಮಗಳ್ನ ಒಳ್ಳೆ ಕಡಿಕೀ ಕೊಡನ ಅಂತ ಇರ್ವಾಗ್ಲೆ ಯಾರೊ ಒಬ್ರು ಈರಂಗೆ ಗೊತ್ತಿಲ್ಲದಂಗೆ ಅವನ ಹೆಂಡ್ತಿ ಕೆಂಪಿನ ಒಪ್ಸಿ ಒಬ್ಬ ಕುಂಟನ್ನ ಕರ್ಕೊಂಡು ಬಂದು ಬಿಟ್ಟಿದ್ದರು. ದುಡ್ಡು ಗಿಡ್ಡು, ಒಡವೆ ಪಡವೆ ಯ್ಯಾನೂ ಬ್ಯಾಡಾ, ನಾವೇ ಖರ್ಚಾಂಕಂಡು ಮದ್ವೆ ಮಾಡ್ಕತೀವಿ, ಉಡ್ಗಿ ಸಂದಗವ್ಳೆ ಅಂತ ಗಂಡಿನವ್ರು ಯೋಳಿದ ಕೂಡಲೆ ಕೆಂಪಿ ಒಪ್ಕಂಡ್ಬುಟ್ಟಿದ್ಲು; ಗಂಡ್ಮಕ್ಕಳೂ ಹೂ ಅಂದ್ಬುಟ್ಟಿದ್ವು. ಮನೆ ಕಡೆ ಸಂದಾಗಿದ್ರು ಅಂತ ಅವನ್ಗ್ ಲಗ್ನ ಮಾಡೋದು ಅಂತ ಸಣ್ಣಿನ್ನೂ ಒಪ್ಸಿ ಬಿಟ್ಟಿದ್ರು. ಮನ್ಯವ್ರೆಲ್ಲ ಒಪ್ಕಂಡ ಮ್ಯಾಲೆ ಇನ್ನೇನು ಅಂತ ಸಣ್ಣಿನೂ ಹ್ಞೂ ಅಂದಿದ್ಳು. ಈರಂಗೆ ಮಾತ್ರ ಆ ಸಂಬಂಧ ಸುತಾರಾಂ ಇಷ್ಟ ಇಲ್ಲದೆ ಈ ಮದ್ವೆನೆ ಬ್ಯಾಡಾ ಅಂತ ಹಟ ಹಿಡಿದಿದ್ದ.

“ನಿನ್ನ ಯೋಗ್ತಿಗೆ ಇನ್ನೆಂತ ಗಂಡ್ನಾ ಹುಡುಕ್ತಿಯೋ ಮೂದೇವಿ, ಸುಮ್ಕೆ ಒಪ್ಕೊ. ವರ್ದಕ್ಷಣೆ, ದುಡ್ಡು, ಒಡ್ವೆ ಯ್ಯಾನು ಬ್ಯಾಡ, ನಾವೇ ಖರ್ಚಾಕಂಡು ಮದ್ವೆ ಮಾಡ್ಕತೀವಿ ಅಂತ ಅವ್ರು ಏಳೀಲ್ವಾ. ಇನ್ನೇನ್ ನಿಂಗೆ ಗುನಗು, ಬ್ಯಾರೆ ಕಡೇಕೆ ಮಾಡೋಕೆ ದುಡ್ಡು ಮಡ್ಗಿದೀಯಾ. ಗಾಣಗಿತ್ತಿ ಅಯ್ಯೊ ಅಂದ್ರೆ ಮಗೀನೆತ್ತಿ ತಣ್ಣಗಾಯ್ತಾದಾ. ಯೊನ್ಯೊನೊ ಯ್ಯೋಳಿ ಮದ್ವೆ ತಪ್ಸ ಬ್ಯಾಡಾ, ಸಣ್ಣಿನೇ ಒಪ್ಕಂಡವ್ಳೆ, ತೆಪ್ಗೀರು ನೀನು” ಅಂತ ಈರ್ನ ಮೂತಿಗೆ ತಿರ್ವಿ ಕೆಂಪಿ ಬಾಯಿ ಮುಚ್ಚಿಸಿದ್ದಳು. ಮಗ್ಳಿಗೆ ಏಳಿ ನೋಡ್ದ, ನಿನ್ನಂತ ಗೊಂಬ್ಗೆ ಅಂತ ಕುಂಟನ್ನ ಕಟ್ಕೊದಾ, ಬ್ಯಾಡಾ ಕಣೆ ಮಗಾ, ಕೈಕಾಲು ನೆಟ್ಟಗಿದ್ರೆ ಗಂಜಿನಾದ್ರೂ ಕುಡ್ಕಂಡು ಬದ್ಕೆಬ್ಯೆದು, ಬ್ಯಾಡಾ ಕಣವ್ವ, ನಾನೇ ಇನ್ನೂ ವೈನದ ಗಂಡ್ನ ತತ್ತಿನಿ, ನೀನು ಈ ಗಂಡ್ನಾ ಬ್ಯಾಡಾ ಅನ್ನು' ಅಂತ ಮಗ್ಳಿಗೆ ಯೋಳಿ ಕೊಟ್ಟಿದ್ದ. ಆದ್ರೆ ಸಣ್ಣಿ ಅಪ್ಪನ ಮಾತ್ನ ಕೇಳಿರ್ಲೆ ಇಲ್ಲ. ಯಾರೋ ಒಬ್ಬ, ಸದ್ಯ ಈ ಮನೆಯಿಂದ ತೊಲ್ಗೋದ್ರೆ ಸಾಕು ಅಂದ್ಕಂಡಿದ್ಲು. ದಿನಾ ಅಣ್ಣ ಅನ್ಕಂಡವು ಕುಡ್ಕೊಂಡು ಬಂದು ಜಗ್ಳ ಮಾಡೊದನ್ನ, ಹೊಡ್ದಾಡೊದನ್ನ ನೋಡಿ ನೋಡಿ ಸಾಕಾಗಿ ಹೋಗಿತ್ತು. ತನಗೆ ಎಂತ ಗಂಡಾ ಸಿಗ್ತಾನೊ, ಅವನಿಂದೇನು ಸುಖಾ ಸುರ್ಗಾ ಬೇಕೊ ಅನ್ನೊ ಆತಂಕದಲ್ಲಿ ಸಣ್ಣಿಗೆ ತನ್ನ ಮದ್ವೆ ಬಗ್ಗೆ ತೀರಾ ನಿರಾಸಕ್ತಿ ಇತ್ತು. ಅವಳಿಗೆ ಯಾರೋ ಒಬ್ಬನ್ನ ಕಟ್ಕೊಳ್ಳೆ ಬೇಕು, ಕಟ್ಕೊಂಡ್ರೆ ಆಯ್ತು ಅನ್ನೊ ನಿರ್ಲಿಪ್ತತೆ ಅವಳ್ದು. ಅಂಗಾಗೆ ಸಣ್ಣಿ ಮದ್ವೆಗೆ ಒಪ್ಕೊಂಡಿದ್ದಳು. ಮನೆಯಲ್ಲಿ ಕಿತ್ತು ತಿನ್ನೊ ಬಡತನ, ಅಣ್ಣಂದಿರಾ ಬೇಜವಾಬ್ದಾರಿ ನಡವಳಿಕೆ, ಅಪ್ಪನ ಅಸಹಾಯಕತೆ, ತಾಯಿಯ ಅಳಲು ಇದೆನ್ನೆಲ್ಲ ನೋಡಿ ಮದ್ವೆಗೆ ಒಪ್ಕಂಡು ಬಿಟ್ಟಿದ್ದಳು. ಆದರೆ, ಅಪ್ಪ ಹಿಂಗೆಲ್ಲ ಮಾಡ್ಕತನೆ ಅಂತ ಗೊತ್ತಿಲ್ಲದ ಸಣ್ಣಿ ಹೆದ್ರಿ ಹೋಗಿದ್ದಳು. ಅಪ್ಪ ತನ್ನ ಮ್ಯಾಲೆ ಏಟೊಂದು ಪೀರುತಿ ಇಟ್ಕಂಡವ್ನೆ ಅಂತ ಗೊತ್ತಿದ್ದ ಸಣ್ಣಿ ಅಪ್ಪ ಇಂಗೆ ಮಾಡ್ಕತಾನೆ ಅಂತ ಕನಸು ಮನಸ್ಸಿನಲ್ಲೂ ತಿಳ್ಕಂಡಿರಲಿಲ್ಲ. ತಾನು ಕುಂಟನ್ನ ಮದ್ವೆ ಮಾಡ್ಕಂತಿನಿ ಅಂತ ತನ್ನ ಪೀರಾಣನೆ ಕಳ್ಕಳೋ ಮಟಕ್ಕೆ ವೊಂಟೋಯ್ತನೆ ಅಂದ್ರೆ ಅವನಿಗೆ ಇನ್ನೆಷ್ಟು ಬ್ಯಾಸರ ಆಗಿರ ಬ್ಯಾಡಾ. ಅಪ್ಪಾಯ್ಯಾ ತನ್ನ ಮ್ಯಾಲೆ ಇಟೋಂದು ಪಿರೀತಿ ಮಡಿಕೊಂಡವ್ನೆ, ತಾನು ಕುಂಟನ್ನ ಮದ್ವೆ ಆಗೋದನ್ನ ಇಟೋಂದು ವಿರೋಧ ಮಾಡ್ತಾನೆ ಅಂತ ಅಂದು ಕೊಂಡಿರಲಿಲ್ಲ. ಏನೆ ಆಗಲಿ ತನ್ನಪ್ಪ ಬದುಕಿರಬೇಕು, ಮದ್ವೆ ಆಗ್ದೆ ಇದ್ರೂ ಪರ್ವಾಗಿಲ್ಲ,